

# ಹಿರಿತೆರೆಗೇ ಜೂನಿಯರ್ ಎನ್‌ಟಿಆರ್ ಜೈ

■ ವಿಶಾಖ ಎನ್‌.

ಕೋವಿಡ್ ಎರಡನೇ ಅಲೆ ಬಂದ ನಂತರ ದೊಡ್ಡ ದೊಡ್ಡ ಸಿನಿಮಾಗಳ ಗತಿ–ಸ್ಥಿತಿಯೇನು ಎನ್ನುವುದೇ ಚರ್ಚೆ. ಹಿರಿತೆರೆಯನ್ನೇ ಬಿಡುಗಡೆಗೆ ನೆಚ್ಚಿಕೊಂಡಿರುವ ಬೃಹತ್ ಬಜೆಟ್‌ನ ಚಿತ್ರಗಳೆಷ್ಟು ಎಂದು ಎಣಿಸಲಾರಂಭಿಸಿದ್ದಾರೆ. ಅವುಗಳಲ್ಲಿ 'ಆರ್‌ಆರ್‌ಆರ್' ಬಹುಭಾಷಾ ಚಿತ್ರ ಕೂಡ ಪ್ರಮುಖವಾದುದು.

'ಬಾಹುಬಲಿ'ಯ ಎರಡನೇ ಭಾಗ ತೆರೆಕಂಡ ಮೇಲೆ ರಾಜಮೌಳಿ ಎರಕದಲ್ಲಿ ಏನು ಬಂದೀತೆನ್ನುವ ಕುತೂಹಲ ಚಿತ್ರರಸಿಕರಲ್ಲಿ ಸಹಜವಾಗಿಯೇ ಇದೆ. ಜೂನಿಯರ್ ಎನ್‌ಟಿಆರ್, ರಾಮ್‌ಚರಣ್ ಹಾಗೂ ಆಲಿಯಾ ಭಟ್ ಅಭಿನಯದ 'ಆರ್‌ಆರ್‌ಆರ್'ನಲ್ಲಿ ಜೂನಿಯರ್ ಎನ್‌ಟಿಆರ್ ಅವರದ್ದು ಭೀಮಕಾಯ. ಕೆಲವರು ಅವರನ್ನು ಈ ಸಿನಿಮಾ ಕುರಿತು ಇತ್ತೀಚೆಗೆ ಕೇಳಿದ ಪ್ರಶ್ನೆ ಉತ್ತರ ಕೊಡಲು ಪ್ರೇರೇಪಿಸಿದೆ.

'ಆರ್‌ಆರ್‌ಆರ್' ಕೂಡ ಒಟಿಟಿ ಮೂಲಕವೇ ಬಿಡುಗಡೆಯಾಗುತ್ತದಂತೆ, ಹೌದಾ' ಎನ್ನುವುದೇ ಆ ಪ್ರಶ್ನೆ.

'ಬಾಹುಬಲಿ ಅಥವಾ ಜುರ್ಯಾಸಿಕ್ ಪಾರ್ಕ್ ತರಹದ ಚಿತ್ರಗಳನ್ನು ದೊಡ್ಡ ಪರದೆ ಹಾಗೂ ತಾಂತ್ರಿಕವಾಗಿ ಉತ್ತಮ ಆಡಿಯೊ ಔಟ್‌ಪುಟ್ ಇರುವ ಕಡೆಯೇ ನೋಡಬೇಕು. ಆಗಲೇ ಮಾಡಿರುವ ಕೆಲಸಕ್ಕೆ ಅರ್ಥ. ಅಂಥ ಸಿನಿಮಾಗಳು ಯಾವತ್ತಿಗೂ ಒಟಿಟಿ ಮೇಲೆ ಕಣ್ಣು ಹಾಯಿಸಲು ಸಾಧ್ಯವಿಲ್ಲ. ಆರ್‌ಆರ್‌ಆರ್ ಕೂಡ ಅಂತಹುದೇ ಜಾಯಮಾನಕ್ಕೆ ಸೇರಿದ ಚಿತ್ರ. ನಮ್ಮದೇನಿದ್ದರೂ ಬೆಳ್ಳಿತೆರೆಯತ್ತಲೇ ಗುರಿ' ಎಂದು ಜೂನಿಯರ್ ಎನ್‌ಟಿಆರ್ ಉತ್ತರಿಸಿದ್ದಾರೆ.

ಕೋವಿಡ್ ಅಲೆಗಳೆಲ್ಲ ತಗ್ಗಿದ ಮೇಲೆ ಜನ ಮತ್ತೆ ಚಿತ್ರಮಂದಿರಗಳಿಗೆ ಬರುತ್ತಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ ಎಂದು ಆತ್ಮವಿಶ್ವಾಸದಿಂದ ಹೇಳಿರುವ ಜೂನಿಯರ್ ಎನ್‌ಟಿಆರ್, ಇತ್ತೀಚೆಗೆ ಕೋವಿಡ್ ಜಾಗೃತಿಗಾಗಿ ಕನ್ನಡದಲ್ಲಿ ಮಾತನಾಡಿಯೂ ಸುದ್ದಿಯಾಗಿದ್ದರು.

ಜೂನಿಯರ್ ಎನ್‌ಟಿಆರ್ ಮಾತನ್ನು ನಿರ್ದೇಶಕ ರಾಜಮೌಳಿ ಕೂಡ ಅನುಮೋದಿಸಿದ್ದು, 'ಆರ್‌ಆರ್‌ಆರ್' ಯಾವ ಕಾಲದಲ್ಲಿ ತೆರೆಕಂಡರೂ ಹಳಸಲು ಎನಿಸುವುದಿಲ್ಲ ಎಂಬ ಆತ್ಮವಿಶ್ವಾಸದಲ್ಲಿ ಇದ್ದಾರೆ.

ಹಿರಿತೆರೆಯಲ್ಲೇ ತಮ್ಮ 'ರಾಧೆ' ಸಿನಿಮಾ ಬಿಡುಗಡೆಯಾಗಬೇಕು ಎಂದು ಬಯಸಿ, ಅದಕ್ಕಾಗಿ ಸಿದ್ಧತೆ ನಡೆಸಿದ್ದ ಸಲ್ಮಾನ್ ಖಾನ್ ಕೂಡ ಈಗ ಒಟಿಟಿ ನೆಚ್ಚಿಕೊಳ್ಳಬೇಕಾಗಿ ಬಂದದ್ದನ್ನು ಕಂಡಿದ್ದೇವೆ. 'ಆರ್‌ಆರ್‌ಆರ್' ಸ್ಥಿತಿ ಏನಾಗುವುದೋ ನೋಡಬೇಕು. ■

## ಸಲ್ಮಾನ್ ಬಾಡಿಗಾರ್ಡ್ ಸಂಬಳವೆಷ್ಟು?

ಗುರುಮೀತ್ ಸಿಂಗ್ ಜಾಲಿ ಎಂಬ ಕಟ್ಟುಮಸ್ತು ಆಕೃತಿ ಶೇರಾ ಎಂದೇ ಹೆಸರುವಾಸಿ. ಸಲ್ಮಾನ್ ಖಾನ್ ತಮ್ಮ ಹುರಿಗಟ್ಟಿದ ಕೈಗಳನ್ನು ಅಗಲ ಮಾಡಿಕೊಂಡು ನಡೆಯುತ್ತಿದ್ದರೆ ಅವರಿಗೆ ನೆರಳಾಗಿ ಶೇರಾ ಇರುವುದನ್ನು ನಾವು ನೋಡಬಹುದು. ಸಲ್ಮಾನ್ ಅವರನ್ನು ಮೀರಿಸುವ ದೇಹಾಕಾರ ಇವರದ್ದು.

ಶೇರಾ ಎಂದರೆ ಬಾಲಿವುಡ್ ಸ್ಟಾರ್‌ಗಳಷ್ಟೇ ಖದರ್ ಇರುವ ವ್ಯಕ್ತಿ. ವಿಲ್ ಸ್ಮಿತ್, ಜಾಕಿ ಚಾನ್ ತರಹದವರು ಭಾರತಕ್ಕೆ ಭೇಟಿ ನೀಡಲು ಬಂದಾಗ ಅವರಿಗೆ ಕಾವಲಾಗಿ ಕೆಲಸ ನಿರ್ವಹಿಸಿದ್ದವರು ಇದೇ ಶೇರಾ.

ಸಲ್ಮಾನ್ ಖಾನ್ ಬಾಡಿಗಾರ್ಡ್ ಆಗಿ ಅವರು




25 ವರ್ಷಗಳಿಂದ ಕೆಲಸ ಮಾಡಿದ್ದಾರೆ. ಸ್ಟಾರ್ ನಟನ ಏರಿಳಿತಗಳನ್ನೆಲ್ಲ ಹತ್ತಿರದಿಂದ ಕಂಡಿರುವ ಅವರು ಅತಿ ನಂಬಿಕಸ್ಥ ಎಂದೂ ಶಹಬ್ಬಾಸ್‌ಗಿರಿ ಪಡೆದಿದ್ದಾರೆ.

ಸಲ್ಮಾನ್ ಖಾನ್ ತರಹದ ಸ್ಟಾರ್ ನಟನ ಬಾಡಿಗಾರ್ಡ್ ತಿಂಗಳಿಗೆ ಎಷ್ಟು ಸಂಪಾದಿಸಬಹುದು ಎಂಬ ಚರ್ಚೆ ಇತ್ತೀಚೆಗೆ ಬಾಲಿವುಡ್ ಓಣಿಗಳಲ್ಲಿ ನಡೆದಿತ್ತು. ಒಂದು ಮೂಲದ ಪ್ರಕಾರ ತಿಂಗಳಿಗೆ ಶೇರಾ 15 ಲಕ್ಷ ರೂಪಾಯಿ ಸಂಬಳ ಪಡೆಯುತ್ತಾರೆ. ಅಷ್ಟೇ ಅಲ್ಲ, ತಮ್ಮದೇ ಬಾಡಿಗಾರ್ಡ್ ಏಜೆನ್ಸಿ ನಡೆಸುವ ಅವರು ಹಾಲಿವುಡ್ ಸೆಲೆಬ್ರಿಟಿಗಳು ಪ್ರವಾಸ ಮಾಡುವಾಗ ಅಗತ್ಯ ಭದ್ರತೆಯನ್ನೂ ಒದಗಿಸುತ್ತಾರೆ.

'ಮಾಲಿಕ್, ಮಾಸ್ಟರ್, ಭಾಯ್ ಎಂದೆಲ್ಲ ನಾನು ಸಲ್ಮಾನ್ ಅವರನ್ನು ಕರೆಯುತ್ತೇನೆ. ಅವರಿಗಾಗಿ ನನ್ನ ಜೀವವನ್ನೇ ನೀಡಲು ಸದಾ ಸಿದ್ಧ. ಈ ಮಾತನ್ನು ಬಹಳ ಹಿಂದಿನಿಂದಲೂ ನಾನು ಹೇಳುತ್ತಾ ಬಂದಿದ್ದೇನೆ. ಅಂಥವರ ಜತೆಗೆ ಇಷ್ಟು ಕಾಲ ಕೆಲಸ ಮಾಡುವ ಅವಕಾಶ ಸಿಕ್ಕಿರುವುದೇ ನನ್ನ ಭಾಗ್ಯ' ಎಂದೆಲ್ಲ ಶೇರಾ ಮಾಲೀಕರ ಗುಣಗಾನ ಮಾಡಿದ್ದಾರೆ. ■